

ಎಲ್ಲಿ ಇವರು ಈ ಮಗೂನ ನನ್ನಿಂದ ದೂರ ಮಾಡಿಬಿಡ್ತಾರೋ ಅನ್ನೋ ಭಯ ಪಾರ್ವತಿಗೆ ಇದ್ದೇ ಇತ್ತು. ಯಾವಾಗ ಆ ಮಗುವಿನ ತಾಯಿ ಬರಲೇ ಇಲ್ಲವೋ ಆಗ ದಿನೇ ದಿನೇ ಅವರ ಭಯ ಕಡಿಮೆಯಾಗ್ತಾ ಬಂತು. ಆದರೆ ಗುರಪ್ಪನವರಿಗೆ ತಾಯಿ ಮಗೂನ ಸೇರಿಸಿಬಿಡಬೇಕು ಅನ್ನೋ ಆಕಾಂಕ್ಷೆ ಮಾತ್ರ ಕಡಿಮೆಯಾಗಿರಲಿಲ್ಲ.

ನಿರ್ಮಲ ಗುರಪ್ಪ ಪಾರ್ವತಿಯವರ ಮಗಳಂತೆಯೇ ಬೆಳೆದಳು. ಯಾರಿಗೂ ಈ ಸೂಕ್ಷ್ಮ ಗೊತ್ತಾಗಲಿಲ್ಲ. ನಿರ್ಮಲ ಹತ್ತು ವರ್ಷದವಳಾಗಿದ್ದಾಗ ಪಾರ್ವತಿ ಏನೋ ಕಾಯಿಲೆ ಬಂದು ಸತ್ತುಹೋದಳು. ನಿರ್ಮಲ ತಾಯಿಯನ್ನು ಕಳೆದುಕೊಂಡು ದುಃಖ ಭರಿಸಲಾರದೇ ನೊಂದಳು. ನಿರ್ಮಲಳ ಮನೋಭಾವನೆಗೆ ಪಾರ್ವತಿ ಹೆತ್ತಮ್ಮ ತಾನೇ. ಆಮೇಲೆ ಗುರಪ್ಪನವರೇ ಅವಳನ್ನು ಸಾಕಿದರು. ಚೆನ್ನಾಗಿ ಓದಿಸಿದರು. ಮದುವೆನೂ ಮಾಡಿದರು. ಮಗಳು ಅಳಿಯ ಅದೇ ಊರಿನಲ್ಲಿ ಇರುವಂತೆ ನೋಡಿಕೊಂಡರು ಕೂಡಾ. ಪಾರ್ವತಿ ಸತ್ತುಹೋದ ಮೇಲೆ ನಿರ್ಮಲಳನ್ನು ಅವಳ ತಾಯಿಯ ಬಳಿ ಸೇರಿಸಬೇಕು ಅನ್ನೋ ಆತುರ ಗುರಪ್ಪನವರಲ್ಲಿ ಇನ್ನಷ್ಟು ಹೆಚ್ಚಾಯಿತು. ಆದರೆ ಅವರಿಗಿದ್ದದ್ದು ಒಂದೇ ದಾರಿ, ದಿನಾ ರೈಲ್ವೇ ಸ್ಟೇಷನ್ನಿಗೆ ಹೋಗಿ ಕಾಯೋದು. ಪೇಪರಿನಲ್ಲಿ ಹಾಕಿಸಿಬಿಡೋಣವೇ ಅಂತ ಒಂದೊಂದು ಸಾರಿ ಅನಿಸಿದರೂ ಹಾಕಿಸಿದ್ದರೆ ನಿರ್ಮಲ ಮಗುವಾಗಿದ್ದಾಗಲೇ ಹಾಕಿಸಬೇಕಿತ್ತು. ಈಗ ಹಾಕಿಸಿ ಪ್ರಯೋಜನ ಆಗಲಾರದು ಅನಿಸಿದುದರ ಜೊತೆಗೆ ಅದು ನಿರ್ಮಲಳಿಗೆ ಗೊತ್ತಾಗಿಬಿಟ್ಟರೆ ಅಂತ ಭಯವೂ ಆಗಿತ್ತು. ಆದರೆ ಆ ತಾಯಿಯನ್ನು ನೆನೆಸಿಕೊಂಡಾಗ ಅವಳು ಎಂಥಾ ತಾಯಿ. ಇಂಥಾ ಎಳೇ ಮಗೂನ ಬಿಟ್ಟು ಹೊರಟೇಹೋದಳಲ್ಲ. ಹೋದೋಳು ಒಂದು ಸಾರಿನಾದರೂ ಬರಬಾರದೇ, ಬಂದು ಹುಡುಕಬಾರದೇ. ಹೋಗಲಿ ಮಗು ಬಳಿ ಒಂದು ವಿಸಿಟಿಂಗ್ ಕಾರ್ಡನ್ನಾದರೂ ಬಿಟ್ಟು